# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006.

## ಕಚೇರಿ ಆದೇಶ

ವಿಷಯ :– ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸುವ ಬಗೆಗೆ.
ಉಲ್ಲೇಖ :– ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 24–08–2020.

**********

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಮುಕ್ತ ಮತ್ತು ದೂರ ಶಿಕ್ಷಣ ಪದ್ಧತಿ' ಯಲ್ಲಿ ಶಿಕ್ಷಣವನ್ನು ನೀಡುತ್ತ ಬಂದಿದೆ. 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯವಾಕ್ಯಕ್ಕೆ ಅನುಗುಣವಾಗಿ 'ಕಲಿಕಾರ್ಥಿ ಸಹಾಯ ಕೇಂದ್ರ' ಗಳ ಮೂಲಕ ವಿದ್ಯಾರ್ಥಿಯ ಬಳಿಗೆ ವಿದ್ಯೆಯನ್ನು ತಲುಪಿಸುತ್ತಲಿದೆ. ಈ ಹಿನ್ನೆಲೆಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಪಾತ್ರವು ಮುಕ್ತ ಮತ್ತು ದೂರಶಿಕ್ಷಣ ಪದ್ಧತಿಯಲ್ಲಿ ಬಹು ಮಹತ್ವದ್ದು.

ಕರ್ನಾಟಕ ರಾಜ್ಯ ಸರ್ಕಾರದ ಆದೇಶ (ಕರ್ನಾಟಕ ರಾಜ್ಯ ಪತ್ರ ಸಂಖ್ಯೆ. ಸಂವ್ಯಶಾಇ 35 ಶಾಸನ 2020, ದಿನಾಂಕ :19–06–2020) ಅನುಸಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮುಕ್ತ ಮತ್ತು ದೂರಶಿಕ್ಷಣವನ್ನು ಕರ್ನಾಟಕ ರಾಜ್ಯದಾದ್ಯಂತ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿ ಪರಿಗಣಿಸಲ್ಪಟ್ಟಿದೆ. ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಪ್ರವೇಶ/ವ್ಯಾಸಂಗ ನೋಂದಣಿಯನ್ನು ಗಣನೀಯವಾಗಿ (G.E.R) ಹೆಚ್ಚಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪಾತ್ರವು ಬಹುಮುಖ್ಯವಾಗಿರುತ್ತದೆ. ಈಗಾಗಲೇ ಕ.ರಾ.ಮು.ವಿ. ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಮಾಲೋಚನಾ ತರಗತಿಗಳು, ಕೌಶಲ್ಯಾಭಿವೃದ್ಧಿ ತರಗತಿಗಳನ್ನು ನಡೆಸುತ್ತಾ ಬಂದಿದೆ. ದಿನಾಂಕ : 10–07–2020 ರಂದು ಹೊಸ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಕರೆದು ದಿನಾಂಕ : 30–07–2020 ರಂದು ಕೊನೆಯ ದಿನವಾಗಿದ್ದು, ತದನಂತರ ಪರಿಶೀಲನಾ ತಂಡಗಳನ್ನು ರಚಿಸಿ, ಪರಿಶೀಲಿಸಿ ಶಿಫಾರಸ್ಸು ಮಾಡಲಾಗಿದೆ. ಅದರಂತೆ ಈ ಆದೇಶ.

**ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ.)/ಕಸಕೇ–01/2020–21, ದಿನಾಂಕ : 25–08–2020**

ಮೇಲಿನ ಪ್ರಸ್ತಾವನೆಗೆ ಒಳಪಟ್ಟು, ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಮತ್ತು ತಜ್ಞರುಗಳ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವ ಸಂಬಂಧ **ದಿನಾಂಕ: 25–08–2020** ರಿಂದ ಜಾರಿಗೆ ಬಂದಂತೆ **ಆಳ್ವಾಸ್ ಕಾಲೇಜು, ಮೂಡಬಿದ್ರೆ, ದಕ್ಷಿಣ** ಕನ್ನಡ. ಈ ಕೇಂದ್ರ/ಕಾಲೇಜನ್ನು ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರವನ್ನಾಗಿ ಸ್ಥಾಪಿಸಿ ಅದೇಶಿಸಿದೆ.

ಆದೇಶದ ಮೇರೆಗೆ

ಕುಲಸಚಿವ 25/8/20

## ನಿಬಂಧನೆಗಳು/ಷರತ್ತುಗಳು

- ಸರ್ಕಾರಿ /ಅನುದಾನಿತ/ಅನುದಾನರಹಿತ / ಕಾನ್ಸಿಟ್ಯೂಯೆಂಟ್ / ಅಫಿಲಿಯೇಟೆಡ್ ಪದವಿ ಕಾಲೇಜುಗಳು.
- ಕರಾಮುವಿ ನೀಡುತ್ತಿರುವ ಕೋರ್ಸುಗಳು ಅಧ್ಯಯನ ಕೇಂದ್ರವಾಗ ಬಯಸುವ ಕಾಲೇಜುಗಳಲ್ಲಿ ಬೋಧನೆಯಾಗುತ್ತಿರಬೇಕು.
- ಆಯಾ ಕೋರ್ಸುಗಳಿಗೆ ಸಂಬಂಧಿಸಿದ ಅರ್ಹ ಬೋಧಕರಿರಬೇಕು.
- ಶೈಕ್ಷಣಿಕ ಮೂಲಭೂತ ಅಗತ್ಯ ಸೌಕರ್ಯಗಳಾದ ತರಗತಿ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯ, ಹಾಗೂ ಕಂಪ್ಯೂಟರ್ ಲ್ಯಾಬ್, ಐ.ಸಿ.ಟಿ, ಸೌಲಭ್ಯ ನಿಯತಕಾಲಿಕೆಗಳು, ಸಿ.ಸಿ ಕ್ಯಾಮೆರಾ, ಉಪಹಾರಗೃಹ, ವಿದ್ಯಾರ್ಥಿ ಕುಂದು-ಕೊರತೆ ನಿವಾರಣಾ ಘಟಕ ಮೊದಲಾದ ಸೌಲಭ್ಯಗಳನ್ನು ಹೊಂದಿರಬೇಕು.
- ಯು.ಜಿ.ಸಿ-ODL-ನಿಯಮಾವಳಿ-2017ರ ಅನುಸಾರ ಜವಾಬ್ದಾರಿ ಹಾಗು ಕರ್ತವ್ಯಗಳನ್ನು ನಿರ್ವಹಿಸುವುದು.
- ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರವಾಗಿ ಆಯ್ಕೆಯಾದ ಕಾಲೇಜುಗಳು, ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಮಾಹಿತಿ (ಪ್ರೀ-ಅಡ್ಮಿಷನ್ ಕೌನ್ಸಲಿಂಗ್) ಯನ್ನು ನೀಡುವುದು. ವಾರಾಂತ್ಯ ಸಮಾಲೋಚನೆ ತರಗತಿ/ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಲು ಸ್ಥಳಾವಕಾಶ ಕಲ್ಪಿಸಿಕೊಡುವುದು.
- ನಿರಂತರ ಆಂತರಿಕ ಮೌಲ್ಯಮಾಪನ ಕಾರ್ಯದಲ್ಲಿ ನೆರವಾಗುವುದು. ಪರೀಕ್ಷೆಗಳನ್ನು ನಡೆಸಲು ಸ್ಥಳಾವಕಾಶ ಕಲ್ಪಿಸಿಕೊಡುವುದು.
- ನಿಯೋಜಿಸಿದ ಸಂಯೋಜನಾಧಿಕಾರಿಗಳು ವರ್ಗಾವಣೆಗೊಂಡಲ್ಲಿ, ರಾಜೀನಾಮೆ ನೀಡಿದಲ್ಲಿ ಅಥವಾ ವಿವಿಯು ಸಂಯೋಜನಾಧಿಕಾರಿಗಳನ್ನು ತೆಗೆದುಹಾಕಿದಲ್ಲಿ, ಕರಾಮುವಿಯಿಂದ ಒದಗಿಸಿರುವ ಎಲ್ಲಾ ಸಾಮಗ್ರಿಗಳ ಕಾರ್ಯಭಾರವನ್ನು ಪ್ರಾಂಶುಪಾಲರು ವಹಿಸಿಕೊಂಡು, ಉತ್ತಮ ಸ್ಥಿತಿಯಲ್ಲಿ ಮುಂದಿನ ಸಂಯೋಜನಾಧಿಕಾರಿಗಳಿಗೆ ಅವುಗಳನ್ನು ಹಸ್ತಾಂತರಿಸುವುದು.
- ವಾರಾಂತ್ಯ ಸಮಾಲೋಚನೆ/ಸಂಪರ್ಕಕಾರ್ಯಕ್ರಮವನ್ನು ಆಯೋಜಿಸುವ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯವು ತಮ್ಮ ಕೇಂದ್ರಕ್ಕೆ ವಹಿಸಿದಲ್ಲಿ, ನಿರ್ವಹಣೆಗೆ ಅರ್ಹ ಮತ್ತು ಅಗತ್ಯ ಸಂಖ್ಯೆಯ ಬೋಧಕ ಸಿಬ್ಬಂದಿಯ ಸೇವೆಯನ್ನು ಒದಗಿಸಿ ನಿಗದಿಪಡಿಸಿದ ವೇಳಾಪಟ್ಟಿಯಂತೆ ಶೈಕ್ಷಣಿಕ ಚಟುವಟಿಕೆಯನ್ನು ನಡೆಸಿಕೊಡುವುದು.
- ಕರಾಮುವಿ ಕೋರುವ ಕಲಿಕಾರ್ಥಿ ಸಹಾಯ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಒದಗಿಸುವುದು.
- ಇದಲ್ಲದೆ, 'ಕಲಿಕಾರ್ಥಿ ಸಹಾಯ ಕೇಂದ್ರದ ಸಂಯೋಜನಾಧಿಕಾರಿಗಳ ಕೈಪಿಡಿ' ಮತ್ತು 'ಶೈಕ್ಷಣಿಕ ಸಮಾಲೋಚಕರ ಕೈಪಿಡಿ'ಗಳಲ್ಲಿ ನಮೂದಿಸಿರುವ ಇತರೆ ಜವಾಬ್ದಾರಿಗಳನ್ನು ನಿರ್ವಹಿಸುವುದು. ಪ್ರತಿ ಕಲಿಕಾರ್ಥಿ ಸಹಾಯ ಕೇಂದ್ರವು ಕಲಿಕಾರ್ಥಿಯ ಸಮಾಲೋಚನಾ ಅವಧಿ, ಆಂತರಿಕ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಕಲಿಕಾರ್ಥಿಗಳ ಕುಂದು-ಕೊರತೆ ನಿವಾರಣೆ ಮಾಹಿತಿಯನ್ನು ನಿರ್ವಹಿಸುವುದು.
- ಕಲಿಕಾ ಸಾಮಗ್ರಿಗಳ ವಿತರಣೆ ಹಾಗು ನಿರ್ವಹಣೆ ಮಾಹಿತಿ ವಿದ್ಯಾರ್ಥಿ ಸಹಾಯ ಕೇಂದ್ರ **'Help Desk'** ನಿರ್ವಹಿಸುವುದು.
- ಮಾಹಿತಿ ಮತ್ತು ಸಂಚಲನ ತಂತ್ರಜ್ಞಾನ ಸೌಕರ್ಯವನ್ನು ಹೊಂದಿರುವುದು, **On line** ಪ್ರವೇಶಾತಿ ಸೌಲಭ್ಯ ಕಲ್ಪಿಸುವುದು.
- ಕ.ರಾ.ಮು.ವಿ. ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಒಂದು ವಿಷಯದಲ್ಲಿ 100 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ.
- ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರಗಳು ನೇರವಾಗಿ ಪ್ರವೇಶಾತಿ ಮಾಡುವಂತಿಲ್ಲ. ಪೂರ್ವಬಾವಿ ಸಮಾಲೋಚನೆಯನ್ನು ಮಾತ್ರ ಮಾಡತಕ್ಕದ್ದು.
- ವಿಶ್ವವಿದ್ಯಾನಿಲಯದ ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಪಡೆಯುವಂತಿಲ್ಲ.
- ಸ್ವಯಂ ಕಲಿಕಾರ್ಥಿ ಸಹಾಯ ಕೇಂದ್ರಗಳು ಪರೀಕ್ಷಾ ಕೇಂದ್ರಗಳಾಗ ಬಯಸುವವರಿಗೆ ಪ್ರತ್ಯೇಕವಾಗಿ ಪರೀಕ್ಷಿಸಲಾಗುವುದು.
- ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರತ್ಯೇಕ ಲಾಗಿನ್ ಐ.ಡಿ. ನೀಡಲಾಗುವುದು.
- ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಕನಿಷ್ಠ ಪ್ರವೇಶಾತಿ ಸಂಖ್ಯೆ 100 ಇರಬೇಕು. 100ಕ್ಕಿಂತ ಕಡಿಮೆ ಪ್ರವೇಶಾತಿ ಇದ್ದಲ್ಲಿ ಸದರಿ ಕೇಂದ್ರವು ತಂತಾನೆ ರದ್ದುಗೊಳ್ಳುವುದು. ಆ ಕೇಂದ್ರದಲ್ಲಿನ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಸಮೀಪದ ಕೇಂದ್ರಕ್ಕೆ ವರ್ಗಾಯಿಸಲಾಗುವುದು.
- ಕಾಲ ಕಾಲಕ್ಕೆ ಬದಲಾಗುವ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ ಹಾಗೂ ಕರಾಮುವಿಯ ನಿಯಮಗಳಿಗನುಸಾರವಾಗಿ ಕಲಿಕಾರ್ಥಿ ಸಹಾಯಕ ಕೇಂದ್ರಗಳು ಕಾರ್ಯ ನಿರ್ವಹಿಸುವುದು. ಒಂದು ವೇಳೆ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿರುವುದು ಕಂಡು ಬಂದಲ್ಲಿ ಅಂತಹ ಕೇಂದ್ರಗಳನ್ನು ರದ್ದುಗೊಳಿಸುವ ಸಂಪೂರ್ಣ ಅಧಿಕಾರ ವಿಶ್ವವಿದ್ಯಾನಿಲಯ ಹೊಂದಿರುತ್ತದೆ.

ಪ್ರತಿಗಳು :-

1. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
4. ನಿರ್ದೇಶಕರು, ಸಂಬಂಧಪಟ್ಟ ಕರಾಮುವಿ ಪ್ರಾದೇಶಿಕ ಕೇಂದ್ರ,
5. ನಿರ್ದೇಶಕರು, ಪ್ರವೇಶಾತಿ ವಿಭಾಗ ಕರಾಮುವಿ, ಮೈಸೂರು.
6. ಗ್ರಂಥಪಾಲಕರು, ಕರಾಮುವಿ, ಮೈಸೂರು.
7. ಕಚೇರಿ ಪ್ರತಿ